ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ.

**ವಿಷಯ:** "ರಾಜ್ಯದಲ್ಲಿನ ಅಂಗನವಾಡಿಗಳಲ್ಲಿ ಮಕ್ಕಳಿಗೆ ಹಾಗೂ ಗರ್ಭೀಣಿಯರು, ಬಾಣಂತಿಯರಿಗೆ ಏಕರೂಪದ ಸಿದ್ಧ ಆಹಾರ ಒದಗಿಸುವ ಸರಕಾರದ ಯೋಜನೆಗೆ ವಿರೋಧ ವ್ಯಕ್ತವಾಗತೊಡಗಿದೆ. ಅಡುಗೆಯ ಸಾಮಗ್ರಿಯಾಗಿ ಸಾಂಬಾರ್ ಪೌಡರ್, ಅನ್ನದ ಕಿಚಡಿ ಮಿಕ್ಸ್ ಸೇರಿದಂತೆ ನಾನಾ ಸಿದ್ಧ ಆಹಾರ ಸಾಮಗ್ರಿಗಳನ್ನು ಅಂಗನವಾಡಿಗಳಿಗೆ ಪೂರೈಕೆ ಮಾಡಲಾಗಿದೆ. ಇದು ಯಾವುದೇ ಪೌಷ್ಠಿಕತೆಯನ್ನು ಕೊಡುವುದಿಲ್ಲ ಎಂಬ ಅಪಸ್ವರ ಕೇಳಿ ಬಂದಿದೆ.

ಈ ಹಿಂದೆ ಬೆಳಗ್ಗೆ ಚಿಕ್ಕಿ, ಮೊಳಕೆ ಕಟ್ಟಿದ ಕಾಳು, ಹಾಲು ನೀಡಿ ಮಧ್ಯಾಹ್ನ ಅಂಗನವಾಡಿಗಳಲ್ಲೇ ತರಕಾರಿಗಳನ್ನು ಒಳಗೊಂಡ ಬಿಸಿಯೂಟ ತಯಾರಿಸಿ ಅಂಗನವಾಡಿ ಮಕ್ಕಳ ಜತೆಗೆ ಗರ್ಭಿಣಿಯರು, ಬಾಣಾಂತಿಯರಿಗೆ ನೀಡಲಾಗುತ್ತಿತ್ತು. ಆದರೆ ಇಲಾಖೆ ಇದಕ್ಕಾಗಿ ಅಡುಗೆ ಎಣ್ಣೆ ಪೂರೈಕೆ ಮಾಡಿಲ್ಲ. ತರಕಾರಿಗಳಿಗೆ ನೆರವು ಇಲ್ಲ ಕೇವಲ ಬೇಳೆ, ಸಾಂಬಾರ್ ಪುಡಿ ಪೂರೈಕೆ ಮಾಡಿದ್ದು ಅಡುಗೆ ಮಾಡುವುದು ಹೇಗೆ ಎಂಬುದು ಅಂಗನವಾಡಿ ಕಾರ್ಯಕರ್ತೆಯರ ಪ್ರಶ್ನೆ ಹಾಗೂ ಪೋಷಕರು ಕೂಡ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಂಗನವಾಡಿಗಳಲ್ಲಿ ಈ ಹಿಂದೆ ಮಕ್ಕಳ ಪೌಷ್ಠಿಕತೆ ಕಾಪಾಡಲು ನೀಡುತ್ತಿದ್ದ ಮೊಳಕೆ ಕಾಳು ಹಾಗೂ ತರಕಾರಿಗಳನ್ನು ಪೂರೈಸುತ್ತಿಲ್ಲ. ತರಕಾರಿಗಳಿಗೆ ನೀಡುತ್ತಿದ್ದ ಸಹಾಯಧನ ಕೂಡ ಇಲ್ಲ. ಜತೆಗೆ ಒಗ್ಗರಣೆಗೆ ಎಣ್ಣೆಕೂಡ ಇಲ್ಲ, ಕೇವಲ ಸಾಂಬಾರ್ ಪುಡಿ ಮತ್ತು ಬೇಳೆಯಲ್ಲಿ ಉತ್ತಮ ಅಡುಗೆ ಮಾಡಲು ಹೇಗೆ ಸಾಧ್ಯ? ಇದರಿಂದ ಮಕ್ಕಳು, ಗರ್ಭಿಣಿಯರಿಗೆ ಎಷ್ಟರಮಟ್ಟಿಗೆ ಪೋಷಕಾಂಶ ಸಿಗಲಿದೆ ಎಂಬ ಪ್ರಶ್ನೆ ಮೂಡುತ್ತದೆ. ಪೋಷಕರು ಹೇಳುವುದೇನೆಂದರೆ ಅಂಗನವಾಡಿಯಲ್ಲಿ ಕೊಟ್ಟ ಮೊಳಕೆ ಕಾಳು, ಚಿಕ್ಕಿ, ಹಾಲು ಕೊಡಲಾಗುತ್ತಿತ್ತು, ಅದನ್ನು ಮಕ್ಕಳು ಖುಷಿಯಿಂದ ತಿನ್ನುತ್ತಿದ್ದರು. ಆದರೆ ಕೊಟ್ಟ ರೆಡಿಮೇಡ್ ಫುಡ್ ಬೇಡ, ಮನೆಯಲ್ಲೇ ಊಟ ಮಾಡಿಸುತ್ತೇವೆ ಎಂಬುದಾಗಿ ಎಲ್ಲಾ ಪೋಷಕರ ಅಳಲು.

ಸರ್ಕಾರ ಅಂಗನವಾಡಿಗಳ ವಿಷಯದಲ್ಲಿ ನಿರ್ಲಕ್ಷ್ಯ ತೋರುತ್ತಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಕಳೆದ 2-3 ತಿಂಗಳಿಂದ ಸರಿಯಾಗಿ ಅಡುಗೆ ಸಾಮಗ್ರಿ ಪೂರೈಕೆ ಮಾಡಿಲ್ಲ. ಕೆಲವೆಡೆ ಪೂರೈಕೆಯಾಗಿದ್ದರೆ, ಮತ್ತೆ ಕೆಲವೆಡೆ ಕೇವಲ ಹಾಲಿನ ಪುಡಿ ಪೂರೈಕೆಯಾಗಿದೆ. ಆದರೆ ಅದಕ್ಕೆ ಸಕ್ಕರೆ ಇಲ್ಲ, ಇನ್ನೂ ಕೆಲವೆಡೆ ಹಾಲಿನ ಪುಡಿಯ ಪೂರೈಕೆ ಕೂಡ ಆಗಿಲ್ಲ ಇದರಿಂದ ಸಾಕಷ್ಟು ಸಮಸ್ಯೆಯಾಗುತ್ತಿದೆ. ಸರ್ಕಾರ ಇದರ ಬಗ್ಗೆ ಶೀಘ್ರವಾಗಿ ಕಾರ್ಯಪ್ರವೃತ್ತರಾಗಿ ಮಕ್ಕಳಿಗೆ ಉತ್ತಮ ಆಹಾರವನ್ನು ಒದಗಿಸಬೇಕಾಗಿದೆ" ಎಂಬ ಬಗ್ಗೆ".

**ಉತ್ತರ :**

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ, 2ನೇ ಅಕ್ಟೋಬರ್ 1975 ರಂದು ಪ್ರಾಯೋಗಿಕವಾಗಿ ಮೈಸೂರು ಜಿಲ್ಲೆಯ, ಟಿ. ನರಸೀಪುರ ತಾಲ್ಲೂಕಿನಲ್ಲಿ 100 ಅಂಗನವಾಡಿ ಕೇಂದ್ರಗಳೊಂದಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಈಗ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಲಾಗಿದೆ. 6 ವರ್ಷದ ಒಳಗಿನ ಮಕ್ಕಳ, ಗರ್ಭಿಣಿ, ಬಾಣಂತಿ ಮತ್ತು ಕಿಶೋರಿಯರ ಸರ್ವತೋಮುಖ ಅಭಿವೃದ್ಧಿಯು ಈ ಯೋಜನೆಯ ಮುಖ್ಯ ಗುರಿಯಾಗಿರುತ್ತದೆ.

ರಾಜ್ಯದಲ್ಲಿ 204 ಯೋಜನೆಗಳಡಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 69899 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 196/2001 ರ ಮಧ್ಯಂತರ ತೀರ್ಪಿನಲ್ಲಿ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವಲ್ಲಿ ಯಾವುದೇ ಮಧ್ಯವರ್ತಿಗಳನ್ನು ಉಪಯೋಗಿಸಬಾರದೆಂದು ತಿಳಿಸಲಾಗಿರುತ್ತದೆ. ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಬಲಸಂವರ್ಧಕರನ್ನು ನೇಮಕ ಮಾಡಿ 137 ಮಹಿಳಾ ಪೂರಕ ಪೌಷ್ಠಿಕ ಆಹಾರ ಉತ್ಪಾದನಾ ಹಾಗೂ ತರಬೇತಿ ಕೇಂದ್ರಗಳನ್ನು (ಎಂ.ಎಸ್.ಪಿ.ಟಿ.ಸಿ.) ಸ್ಥಾಪಿಸಲಾಗಿರುತ್ತದೆ.

Scanned with OKEN Scanner

ಪ್ರತಿ ಮಹಿಳಾ ಪೂರಕ ಪೌಷ್ಟಿಕ ಆಹಾರ ಕೇಂದ್ರಗಳಲ್ಲಿ 22-32 ಮಹಿಳೆಯರು ಕೆಲಸ ನಿರ್ವಹಿಸುತ್ತಿದ್ದಾರೆ. ಇವರುಗಳು ಬಡತನದ ಹಿನ್ನಲೆಯಿಂದ ಬಂದವರಾಗಿದ್ದು, ವಿಧವೆಯರು, ವಿಕಲಚೇತನರು, ಪರಿತ್ಯಕ್ತ ಮಹಿಳೆಯರು, ಫಲಾನುಭವಿಗಳ ತಾಯಂದಿರು ಹಾಗೂ ಸ್ತ್ರೀಶಕ್ತಿ ಗುಂಪಿನ ಸದಸ್ಯರು ಆಗಿರುತ್ತಾರೆ. ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ಉದ್ದೇಶದಿಂದ ಈ ಸದಸ್ಯರುಗಳಿಗೆ ವಿವಿಧ ರೀತಿಯ ತರಬೇತಿಗಳನ್ನು ನೀಡಿ ಬಲವರ್ಧನಗೊಳಿಸಲಾಗಿರುತ್ತದೆ. ಈ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಹಾಗೂ ತರಬೇತಿ ಕೇಂದ್ರಗಳು Karnataka Societies Act 1960 ಅಡಿಯಲ್ಲಿ ನೋಂದಣಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಪ್ರಸ್ತುತ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳು ಕಚ್ಚಾ ಆಹಾರ ಪದಾರ್ಥಗಳನ್ನು ಶುಚಿಗೊಳಿಸಿ, ಸಂಸ್ಕರಿಸಿ, ಪ್ಯಾಕ್ ಮಾಡಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುತ್ತಿವೆ.

ಅಕ್ಕಿ, ಗೋಧಿಯನ್ನು ಭಾರತೀಯ ಆಹಾರ ನಿಗಮ ಮೂಲಕ, ಎಣ್ಣೆಯನ್ನು ಕರ್ನಾಟಕ ತೈಲ ಒಕ್ಕೂಟದ ಮೂಲಕ ಮತ್ತು ಹಾಲಿನ ಪುಡಿಯನ್ನು ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಒಕ್ಕೂಟದ ಮೂಲಕ ಖರೀದಿಸಲಾಗುತ್ತಿದೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ (ಸಕ್ಷಮ ಅಂಗನವಾಡಿ ಮತ್ತು ಪೋಷಣ್ 2.0) ಫಲಾನುಭವಿಗಳಿಗೆ ಉತ್ತಮ ಗುಣಮಟ್ಟದ ಆಹಾರ ಒದಗಿಸಲು ಎಂ.ಎಸ್.ಪಿ.ಟಿ.ಸಿ. ಗಳು ಬಿ.ಐ.ಎಸ್. ಪರವಾನಗಿ ಹೊಂದಿರುವ ಮಹಿಳಾ ಗುಂಪುಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 27/05/2022 ಆದೇಶವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 18/07/2022 ರ ಆದೇಶದಲ್ಲಿ ಎತ್ತಿ ಹಿಡಿದಿರುತ್ತದೆ. ಸದರಿ ಆದೇಶದ ಅನುಷ್ಠಾನ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ನ್ಯಾಯಾಂಗ ನಿಂದನಾ ಅರ್ಜಿ ಸಂ:740/2023 ಮತ್ತು ಇತರೆ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:11/10/2023 ರಂದು ನೀಡಿರುವ ಆದೇಶದಲ್ಲಿ ಒಳಗೊಂಡಿರುವ ಮತ್ತು ಎತ್ತಿ ಹಿಡಿಯಲಾಗಿರುವ ಕರಾರು ಒಪ್ಪಂದವನ್ನು ಅನುಷ್ಠಾನಗೊಳಿಸಬೇಕಾಗಿದೆ.

ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಕ್ಕೆ 4 ವಾರಗಳ ಕಾಲಾವಕಾಶ ನೀಡಿರುತ್ತದೆ. ಸದರಿ ಆದೇಶವನ್ನು ಅನುಷ್ಠಾನಗೊಳಿಸುವ ಸಂಬಂಧ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಗಿದ್ದು, ವಿವಿಧ ಕಚ್ಚಾ ಆಹಾರ ಪದಾರ್ಥಗಳ ಖರೀದಿಸುವಿಕೆ ಹಾಗೂ ಎಂ.ಎಸ್.ಪಿ.ಟಿ.ಸಿ. ಗಳು ಪೂರಕ ಪೌಷ್ಟಿಕ ಆಹಾರಗಳನ್ನು ತಯಾರಿಸುವ ವಿಧಾನಗಳ ಬಗ್ಗೆ ಸ್ಪಷ್ಟನೆ ನೀಡಲಾಗಿರುತ್ತದೆ.

ಮುಂದುವರೆದು, ಮಾನ್ಯ ಉಚ್ಚ ನ್ಯಾಯಾಲಯದ ಸದರಿ ಆದೇಶಗಳಲ್ಲಿ ದಿನಾಂಕ: 05/05/2021 ರ ಸರ್ಕಾರದ ಆದೇಶ ಮತ್ತು ದಿನಾಂಕ: 02/07/2020 ರ ನಿರ್ದೇಶನಾಲಯದ ಸುತ್ತೋಲೆಯಂತೆ ಕ್ರಮ ವಹಿಸಲು ಸೂಚಿಸಲಾಗಿದೆ.

ಅದರಂತೆ ಎಂ.ಎಸ್.ಪಿ.ಟಿ.ಸಿ. ಮತ್ತು ಅರ್ಹ 3 ಬಿ.ಐ.ಎಸ್. ಪರವಾನಗಿ ಹೊಂದಿದ ಮಹಿಳಾ ಗುಂಪುಗಳ ನಡುವೆ ಮಾಡಿಕೊಳ್ಳಲಾದ ಕರಾರು ಒಪ್ಪಂದದಲ್ಲಿನ ನಿಬಂಧನೆ-3ರ ಪ್ರಕಾರ, ಐ.ಸಿ.ಡಿ.ಎಸ್. ಫಲಾನುಭವಿಗಳಿಗೆ ಒದಗಿಸಬೇಕಾದ ಪೂರಕ ಪೌಷ್ಟಿಕ ಆಹಾರಗಳಲ್ಲಿನ ಸೂತ್ರ ಹಾಗೂ ನಿರ್ದಿಷ್ಟತೆಗಳನ್ನು ಡಿ.ಎಫ್.ಆರ್.ಎಲ್., ಮೈಸೂರು ಇವರು ಅನುಮೋದಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿರುವ ಮತ್ತು ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನದ ಅನುಗುಣವಾಗಿ ಹಾಗೂ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಫಲಾನುಭವಿಗಳಿಗೆ ಅಗತ್ಯವಿರುವ ಪ್ರೋಟೀನ್ ಮತ್ತು ಕ್ಯಾಲೋರಿಗಳನ್ನೊಳಗೊಂಡ ಆಹಾರ ಪದಾರ್ಥಗಳನ್ನು ಉತ್ಪಾದಿಸಿ ಐ.ಸಿ.ಡಿ.ಎಸ್. ಫಲಾನುಭವಿಗಳಿಗೆ ಸರಬರಾಜು ಮಾಡಲು ತಿಳಿಸಿದೆ.

Scanned with OKEN Scanner

ಶ್ರೀ ಸಿ.ಎನ್. ಮಂಜೇ[illegible]

ಪ್ರಸ್ತುತ ಮೇಲೆ ತಿಳಿಸಿರುವ ಅಂಶಗಳಂತೆ ಎಂ.ಎಸ್.ಪಿ.ಟಿ.ಸಿ. ಗಳು ಆಹಾರ ಪದಾರ್ಥಗಳನ್ನು ಸಿದ್ಧಪಡಿಸುತ್ತಿದ್ದು, ಸದರಿ ಆಹಾರ ಸಾಮಗ್ರಿಗಳು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಹಾಗೂ ಡಿ.ಎಫ್.ಆರ್.ಎಲ್. ನಿರ್ದೇಶನದಂತೆ ಅಗತ್ಯವಿರುವ ಪ್ರೋಟೀನ್ ಮತ್ತು ಕ್ಯಾಲೋರಿಗಳನ್ನೊಳಗೊಂಡಿರುತ್ತವೆ.

ಮುಂದುವರೆದು, ದಿನಾಂಕ: 31/10/2023 ರಲ್ಲಿ ಪೂರಕ ಪೌಷ್ಠಿಕ ಆಹಾರ ಯೋಜನೆಯಡಿ ಅಂಗನವಾಡಿ ಫಲಾನುಭವಿಗಳಿಗೆ ಆಹಾರ ಪದಾರ್ಥಗಳನ್ನು ಒದಗಿಸಲು DFRL ಅನುಮೋದಿತ ಸೂತ್ರಗಳನ್ನು ಎಲ್ಲಾ ಜಿಲ್ಲೆಗಳಿಗೆ ನೀಡಲಾಗಿತ್ತು. 4ನೇ ತ್ರೈಮಾಸಿಕದಲ್ಲಿ ಗೋಧಿ ಮತ್ತು ಅಕ್ಕಿ ಹಂಚಿಕೆ ಅನುಪಾತದಲ್ಲಿ ಬದಲಾವಣೆಯಾಗಿರುವ ಕಾರಣದಿಂದಾಗಿ ಹೊಸ ಗೋಧಿ ಆಧಾರಿತ ಸೂತ್ರಗಳನ್ನು DFRL ನಿಂದ ಅನುಮೋದನೆ ಪಡೆದು ಸದರಿ ಅನುಮೋದಿತ ಸೂತ್ರಗಳನ್ನು ಹಾಗೂ ನಿರ್ದಿಷ್ಟತೆಗಳನ್ನು ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ವಿತರಿಸುವ ಆಹಾರದಲ್ಲಿ ನಿಯಮಾನುಸಾರ ಅನುಷ್ಠಾನಗೊಳಿಸಲು ಈ ಕೆಳಗಿನ ಷರತ್ತುಗಳಿಗೊಳಪಟ್ಟು ಎಲ್ಲಾ ಜಿಲ್ಲೆಗಳಲ್ಲಿ ಕ್ರಮ ವಹಿಸಲು ತಿಳಿಸಲಾಗಿದೆ.

1. MSPTCಗಳು – ಹೊಸ ಸೂತ್ರಗಳನ್ನು ಅನುಷ್ಠಾನಗೊಳಿಸಲು, ಈ ಹಿಂದಿನಂತೆ ಕಚ್ಚಾ ಆಹಾರ ಸಾಮಗ್ರಿಗಳನ್ನು ಸರಬರಾಜು ಪಡೆಯತಕ್ಕದ್ದು ಹಾಗೂ ಯಾವುದೇ pre-mix ಮಾದರಿಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವಂತಿಲ್ಲ.
2. ಬೆಲ್ಲ, ಉಪ್ಪು, ಎಣ್ಣೆ, ಅಕ್ಕಿ, ಬೇಳೆ ಹಾಗೂ ಹಾಲಿನ ಪುಡಿಗೆ ಅಗತ್ಯವಿರುವ ಸಕ್ಕರೆಯನ್ನು ಕಚ್ಚಾ ರೂಪದಲ್ಲಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುವುದು.
3. ದಿ: 31-10-2023ರ ಪತ್ರದೊಂದಿಗೆ ನೀಡಲಾಗಿದ್ದ ಅನುಮೋದಿತ ಆಹಾರ ಸೂತ್ರ ಮತ್ತು ನಿರ್ದಿಷ್ಟತೆಗಳ ಜೊತೆಗೆ ಹೊಸ ಗೋಧಿ ಆಧಾರಿತ ಸೂತ್ರಗಳನ್ನು ಅಕ್ಕಿ ಮತ್ತು ಗೋಧಿ ಲಭ್ಯತೆ ಆಧರಿಸಿ, ಅನುಷ್ಠಾನಗೊಳಿಸತಕ್ಕದ್ದು.

ಮಾತೃಪೂರ್ಣ ಕಾರ್ಯಕ್ರಮದಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಒದಗಿಸಲಾಗುತ್ತಿರುವ ಮಧ್ಯಾಹ್ನದ ಬಿಸಿಯೂಟದಲ್ಲಿ ತರಕಾರಿಯನ್ನು ಬಳಕೆ ಮಾಡಲು ಕ್ರಮ ವಹಿಸಲಾಗುತ್ತಿದೆ.

ಕ್ಷೀರಭಾಗ್ಯ ಯೋಜನೆಯಡಿ 06 ತಿಂಗಳಿಂದ 06 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 05 ದಿನ 150 ಎಂ.ಎಲ್. ಕೆನೆಸಹಿತ ಹಾಲನ್ನು ನೀಡಲಾಗುತ್ತಿದೆ. ಮಾತೃಪೂರ್ಣ ಯೋಜನೆಯಡಿ ಫಲಾನುಭವಿಗಳಿಗೆ ಅಂಗನವಾಡಿ ಕೇಂದ್ರಗಳಲ್ಲಿ ವಿತರಿಸಲಾಗುವ ಮಧ್ಯಾಹ್ನದ ಬಿಸಿಯೂಟದೊಂದಿಗೆ 200 ಎಂ.ಎಲ್. ಕೆನೆಭರಿತ ಹಾಲನ್ನು ನೀಡಲಾಗುತ್ತಿದೆ.

ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ (ಕೆ.ಎಂ.ಎಫ್.)ರವರು ಕೆನೆಭರಿತ ಹಾಲಿನ ಪುಡಿಯನ್ನು ಸರಬರಾಜು ಮಾಡುತ್ತಿರುತ್ತಾರೆ. ಇತ್ತೀಚೆಗೆ, ಕೆ.ಎಂ.ಎಫ್.ಸಂಸ್ಥೆಯಿಂದ ಕೆನೆಭರಿತ ಹಾಲಿನ ಪುಡಿಯನ್ನು ಬಳ್ಳಾರಿ, ವಿಜಯನಗರ, ಯಾದಗಿರಿ, ಕೊಪ್ಪಳ, ಕಲಬುರಗಿ, ಬೀದರ್, ರಾಯಚೂರು, ಬಾಗಲಕೋಟೆ, ಬೆಳಗಾವಿ, ವಿಜಯಪುರ, ಗದಗ, ಉತ್ತರ ಕನ್ನಡ, ದಕ್ಷಣ ಕನ್ನಡ ಉಡುಪಿ ಜಿಲ್ಲೆಗಳಿಗೆ ಸಮರ್ಪಕವಾಗಿ ಸರಬರಾಜು ಆಗುತ್ತಿರುವುದಿಲ್ಲವೆಂದು ವರದಿಗಳು ಬಂದಿರುತ್ತದೆ.

Scanned with OKEN Scanner

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಮತ್ತು ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಂ.ಎಫ್. ಇವರೊಡನೆ ಸಭೆಯನ್ನು ನಡೆಸಿದ್ದು, ಸದರಿ ಸಭೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಂ.ಎಫ್.ಇವರು ಎರಡು ತಿಂಗಳ ಮುಂಗಡ ಹಣವನ್ನು ನೀಡಲು ತಿಳಿಸಿರುತ್ತಾರೆ.

ಮೇಲೆ ತಿಳಿಸಿರುವ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಕೇಂದ್ರ ಸರ್ಕಾರದ ಮಾರ್ಗಸೂಚಿ ಹಾಗೂ DFRL ಅನುಮೋದಿತ ಸೂತ್ರದಂತೆ MSPTC ಗಳಿಂದ ಅಂಗನವಾಡಿ ಫಲಾನುಭವಿಗಳಿಗೆ ಆಹಾರ ಸಾಮಗ್ರಿಗಳನ್ನು ಸಿದ್ಧಪಡಿಸಿ ಪೂರೈಸಲಾಗುತ್ತಿದೆ.

**ಸಂಖ್ಯೆ: ಮಮಇ 40 ಐಸಿಡಿ 2024**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

Scanned with OKEN Scanner